# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/1138/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 06.04.2021.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಕೋಳ್ಳೆಗಾಲ ತಾಲೂಕು, ಚಾಮರಾಜನಗರ ಜಿಲ್ಲೆಯ 2015-16ನೇ ಸಾಲಿನಲ್ಲಿ ಮರಳು ಸಂಗ್ರಹಿಸಿದ ಮತ್ತು ಮರಳು ವಿಲೇವಾರಿ ಮಾಡಿದ ವಹಿಗಳನ್ನು ನಿರ್ವಹಿಸದೇ ಹೋಗಿದ್ದರಿಂದ ಸರ್ಕಾರದ ಉಂಟಾದ ನಷ್ಟವನ್ನು ಎದರುದಾರರಾದ 2, 11 ಮತ್ತು 12 ರವರಿಂದ ಭರಿಸಿಕೊಳ್ಳುವ ಕುರಿತು.

*****

1. ದೂರುದಾರರಾದ ಶ್ರೀ ಕೆ.ಎಲ್.ಲಿಂಗರಾಜು ಬಿನ್ ಲೇಟ್ ಲಿಂಗನಾಯಕ, ಕುನ್ನಗಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀಮತಿ ಕಾಮಾಕ್ಷಮ್ಮ, ತಹಶೀಲ್ದಾರ್, ತಾಲ್ಲೂಕು ಕಛೇರಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಮತ್ತು, (2) ಶ್ರೀ ಸಿ.ಮಹದೇವಯ್ಯ, ಹಿಂದಿನ ತಹಶೀಲ್ದಾರ್, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಹಾಲಿ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ರವರ ವಿರುದ್ಧ ಸಲ್ಲಿಸಿದ ದೂರಿನಲ್ಲಿ (3) ಶ್ರೀ ಚಂದ್ರಮೌಳಿ, ತಹಶೀಲ್ದಾರ್, ಯಳಂದೂರು ತಾಲ್ಲೂಕು, ಅಧಿಕ ಪ್ರಭಾರ ತಹಶೀಲ್ದಾರ್, ಕೊಳ್ಳೇಗಾಲ ತಾಲ್ಲೂಕು, (4) ಶ್ರೀ ಇನಾಯತ್ ಉಲ್ಲಾ ಷರೀಫ್, ಕಾರ್ಯಪಾಲಕ ಅಭಿಯಂತರರು, ಚಾಮರಾಜನಗರ ವಿಭಾಗ, ಹಾಲಿ ನಿವೃತ್ತಿ, ವಾಸ: ನಂ. 93, 43ನೇ ಮುಖ್ಯ ರಸ್ತೆ, ಸುಭಾಷ ನಗರ, ಮೈಸೂರು-17, (5) ಶ್ರೀ ಅರ್.ಉಜ್ಜೈನಿ ಸಿದ್ದಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೊಳ್ಳೇಗಾಲ, ಹಾಲಿ ನಿವೃತ್ತಿ, ನಂ. 23, 2ನೇ ಕ್ರಾಸ್, ನ್ಯೂ ಇಂಕಮ್ ಟ್ಯಾಕ್ಸ್ ಲೇಔಟ್, ನಾಗರಭಾವಿ, ಬೆಂಗಳೂರು, (6) ಶ್ರೀ ಹೆಚ್.ಕುಮಾರ್, ಪ್ರಭಾರ ಸಹಾಯಕ

ಕಾರ್ಯಪಾಲಕ ಅಭಿಯಂತರರು,, ಕೊಳ್ಳೇಗಾಲ, ಹಾಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಉಪ ವಿಭಾಗ, ಮಲೆ ಮಹದೇಶ್ವರ ಬೆಟ್ಟ, (7) ಶ್ರೀ ಬಿ.ದೊರೆಸ್ವಾಮಿ, ಸಹಾಯಕ ಕಾರ್ಯಪಾಲಕ ಅಭಿಯಂತರರು,, ಕೊಳ್ಳೇಗಾಲ, ಹಾಲಿ ಸಹಾಯಕ ಅಭಿಯಂತರರು, ಲೋಕೋಪಯೋಗಿ ಉಪ ವಿಭಾಗ, ಕೊಳ್ಳೇಗಾಲ, (8) ಶ್ರೀ ಬಿ.ರಮೇಶ್, ಸಹಾಯಕ ಅಭಿಯಂತರರು, ಲೋಕೋಪಯೋಗಿ ಉಪ ವಿಭಾಗ, ಕೊಳ್ಳೇಗಾಲ, (9) ಶ್ರೀ ಪಿ.ಸೀನಣ್ಣ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಉಪ ವಿಭಾಗ, ಕೊಳ್ಳೇಗಾಲ, (10) ಶ್ರೀ ಎನ್.ಸುರೇಂದ್ರ ಕುಮಾರ್, ಕಿರಿಯ ಅಭಿಯಂತರರು, ಲೋಕೋಪಯೋಗಿ ಉಪ ವಿಭಾಗ, ಕೊಳ್ಳೇಗಾಲ, (11) ಶ್ರೀ ಎಂ.ರೇವಣ್ಣ, ಕಿರಿಯ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಉಪ ವಿಭಾಗ, ನಂಜನಗೂಡು, (12) ಕು. ಅಕ್ಷತಾ, ಕಿರಿಯ ಅಭಿಯಂತರರು, ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ವಿಭಾಗ, ಕೃಷಿ ಮಾರುಕಟ್ಟೆ ಇಲಾಖೆ, ಪ್ರೀಮಿಯರ್ ಸ್ಟುಡಿಯೋ ಹತ್ತಿರ, ಹುಣಸೂರು ರಸ್ತೆ, ಮೈಸೂರು, (13) ಶ್ರೀ ಧರ್ಮೇಂದ್ರ, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕೊಳ್ಳೇಗಾಲ, (14) ಶ್ರೀ ಆರ್.ಮುರುಗೇಶ್, ದ್ವಿತೀಯ ದರ್ಜೆ ಸಹಾಯಕರು, ಲೋಕೋಪಯೋಗಿ ಇಲಾಖೆ ಉಪ ವಿಭಾಗ, ಕೊಳ್ಳೇಗಾಲ ಮತ್ತು, (15) ಶ್ರೀ ಎಂ.ಶಿವಮೂರ್ತಿ, ಅಕ್ಷರಸ್ಥ ಸಹಾಯಕ, ಲೋಕೋಪಯೋಗಿ ಇಲಾಖೆ ಉಪ ವಿಭಾಗ, ಕೊಳ್ಳೇಗಾಲ ರವರುಗಳನ್ನು 3ನೇ ರಿಂದ 15ನೇ ಎದುರುದಾರರನ್ನಾಗಿ ಸೇರಿಸಿ ತನಿಖೆ ನಡೆಸಲಾಗಿರುತ್ತದೆ. (ಇನ್ನು ಮುಂದೆ 'ಎದುರುರುದಾರರ 1 ರಿಂದ 15' ಎಂದು ಕರೆಯಲ್ಪಡುತ್ತಾರೆ).

**2. ದೂರಿನ ಸಂಕ್ಷಿಪ್ತ ಸಾರಾಂಶ:-**

2015ನೇ ಸಾಲಿನಲ್ಲಿ ಕೊಳ್ಳೇಗಾಲ ತಾಲ್ಲೂಕು ತಹಶೀಲ್ದಾರ್‌ರಾಗಿದ್ದ 2ನೇ ಎದುರುದಾರರು 10 ಲಕ್ಷ ರೂಪಾಯಿಗಳ ಮರಳನ್ನು ಅಕ್ರಮವಾಗಿ ಮಾರಾಟ

ಮಾಡಿ ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ. 2017ರಲ್ಲಿ 1ನೇ ಎದುರುದಾರರು ಮರಳು ಮಾರಾಟದ ಎಲ್ಲಾ ದಾಖಲೆಗಳನ್ನು ಅಕ್ರಮವಾಗಿ ನಾಶಗೊಳಿಸಿರುತ್ತಾರೆ. 1ನೇ ಮತ್ತು 2ನೇ ಎದುರುದಾರರ ವಿರುದ್ಧ ತನಿಖೆ ಮಾಡಿ ರೂ.10 ಲಕ್ಷಗಳನ್ನು ವಸೂಲಿ ಮಾಡಿ ಸರ್ಕಾರದ ಖಾತೆಗೆ ಜಮೆ ಮಾಡುವಂತೆ ಆದೇಶಿಸಬೇಕೆಂದು ಆರೋಪಿಸಿ ದೂರು ಸಲ್ಲಿಸಿರುತ್ತಾರೆ.

3. **1ನೇ ಎದುರುದಾರರ ಆಕ್ಷೇಪಣೆ:**

ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಮರಳು ಉಸ್ತುವಾರಿ ಸಮಿತಿಯು ಕಾರ್ಯನಿರ್ವಹಿಸುತ್ತಿದ್ದು, ಉಪವಿಭಾಗಾಧಿಕಾರಿಗಳು ಅಧ್ಯಕ್ಷರಾಗಿದ್ದು ತಾಲ್ಲೂಕು ತಹಶೀಲ್ದಾರ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯ ಮುಖ್ಯಸ್ಥರುಗಳು ಸಮಿತಿಯ ಸದಸ್ಯರಾಗಿರುತ್ತಾರೆ. ಸಮಿತಿ ಅಧ್ಯಕ್ಷರ ಆದೇಶದನ್ವಯ ಮೂರು ಇಲಾಖೆಯವರು ಕೆಲಸ ನಿರ್ವಹಿಸುತ್ತಿದ್ದು, ಮೂರು ಇಲಾಖೆಯವರು ಸೇರಿ ಜಪ್ತಿ ಮಾಡಿ ಸಂಗ್ರಹವಾದ ಮರಳನ್ನು ಅಳತೆ ಮಾಡಿಸಿ ಅಳತೆಯಾದಂತಹ ದಾಖಲೆಗಳನ್ನು ಸ್ಟಾಕ್ ರಿಜಿಸ್ಟರ್ ನಲ್ಲಿ ನಮೂದಿಸುವ ಕಾರ್ಯವನ್ನು ಲೋಕೋಪಯೋಗಿ ಇಲಾಖೆಯು ನಿರ್ವಹಿಸುತ್ತದೆ.

ಜಪ್ತಿ ಮಾಡಿದಂತಹ ಮರಳನ್ನು ಅಳತೆಯ ನಂತರ ತಾಲ್ಲೂಕು ಕಛೇರಿಯ ಆವರಣದಲ್ಲಿ ಸಂಗ್ರಹ ಮಾಡಲಾಗಿರುತ್ತದೆ ಹೊರತು ತಾಲ್ಲೂಕು ಕಛೇರಿಯಿಂದ ಬೇರೆ ಯಾವುದೇ ವಿಧವಾದ ನಡವಳಿಯನ್ನು ನಡೆಸಲಾಗುವುದಿಲ್ಲ ಹಾಗೂ ಸಂಗ್ರಹವಾದ ಮರಳನ್ನು ಎತ್ತುವಳಿ ಪರ್ಮಿಟ್‌ನ್ನು ನೀಡುವ ಅಧಿಕಾರವು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯವರಿಗೆ ಸಂಬಂಧಿಸಿದ್ದು, ಯಾವುದೇ ಮರಳು ಸಂಗ್ರಹದ ದಾಖಲೆಗಳನ್ನು ನಾಶಪಡಿಸಿರುವುದಿಲ್ಲ ಹಾಗೂ ಸರ್ಕಾರಕ್ಕೆ ಜಮಾ ಮಾಡಬೇಕಾದ ಮೊತ್ತವನ್ನು ದುರುಪಯೋಗ ಮಾಡಿಕೊಂಡಿರುವುದಿಲ್ಲ" ಎಂದು ನಮೂದಿಸಿರುತ್ತಾರೆ.

4. **2ನೇ ಎದುರುದಾರರ ಆಕ್ಷೇಪಣೆ:**

ತಾವು ಕೊಳ್ಳೇಗಾಲ ತಹಶೀಲ್ದಾರ್‌ರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಮರಳು ಗಣಿಗಾರಿಕೆ ಕಡಿವಾಣ ಹಾಕಿ ಅಕ್ರಮ ಮರಳುಗಾರಿಕೆಯನ್ನು ಸಂಪೂರ್ಣವಾಗಿ ತಡೆಹಿಡಿದಿದ್ದು, ಲೋಕೋಪಯೋಗಿ ಇಲಾಖಾ ವತಿಯಿಂದ ಅಳತೆ ಮಾಡಿಸಿ ದಾಸ್ತಾನು ಮಾಡಿದ್ದು, ಸದರಿ ಇಲಾಖೆಯವರೇ ವಿಲೇವಾರಿ ಮಾಡಿರುತ್ತಾರೆ ಎಂದು ನಮೂದಿಸಿರುತ್ತಾರೆ.

5. **ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಾಮರಾಜನಗರ ರವರು ಸಲ್ಲಿಸಿದ ತನಿಖಾ ವರದಿ:**

2ನೇ ಎದುರುದಾರರು ಕೊಳ್ಳೇಗಾಲ ತಾಲ್ಲೂಕು ತಹಶೀಲ್ದಾರ್‌ರಾಗಿ ದಿನಾಂಕ: 04/06/2014 ರಿಂದ 11/08/2016 ರವರೆಗೆ 3ನೇ ಎದುರುದಾರರು ದಿನಾಂಕ: 11/08/2016 ರಿಂದ 03/10/2016 ರವರೆಗೆ ಹಾಗೂ ದಿನಾಂಕ: 03/10/2016 ರಿಂದ 1ನೇ ಎದುರುದಾರರು ಕರ್ತವ್ಯ ನಿರ್ವಹಿಸಿರುತ್ತಾರೆ. 2015ನೇ ಸಾಲಿನಲ್ಲಿ ತಹಶೀಲ್ದಾರ್‌ರಾಗಿದ್ದ 2ನೇ ಎದುರುದಾರರು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದ ಮರಳನ್ನು ಸರ್ಕಾರದ ವಶಕ್ಕೆ ಪಡೆದುಕೊಂಡು ಸಹಾಯಕ ಕಾರ್ಯಪಾಲಕ ಅಭಿಯಂತರರು ಇವರಿಂದ ಅಳತೆ ಮಾಡಿಸಿ ತಾಲ್ಲೂಕು ಕಛೇರಿಯ ಆವರಣದಲ್ಲಿ ಸಂಗ್ರಹಿಸಿರುತ್ತಾರೆ.

6. ತಾಲ್ಲೂಕು ಕಛೇರಿ ಕೊಳ್ಳೇಗಾಲದ ಆವರಣದಲ್ಲಿ ಸಂಗ್ರಹಿಸಲಾಗಿದ್ದ ಮರಳನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ. 5 ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕೊಳ್ಳೇಗಾಲ ರವರು ಹಾಗೂ ದಿನಾಂಕ: 03/01/2017 ರಿಂದ ಉಪ ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಚಾಮರಾಜನಗರ ಇವರು ವಿಲೇವಾರಿ ಮಾಡಿದ್ದು ವಿಲೇವಾರಿ ಮಾಡಿರುವ ಬಾಬ್ತು ಸದರಿ ಕಛೇರಿಯಲ್ಲಿ ದಾಖಲೆಗಳು ಇರುವುದಿಲ್ಲ. ಹಣ

ಸಂಗ್ರಹಿಸಿದ್ದಾಗಲಿ ಅಥವಾ ಖಜಾನೆಗೆ ಜಮಾ ಮಾಡಿರುವ ಬಗ್ಗೆಯಾಗಲಿ ವಿವರ ಇರುವುದಿಲ್ಲ.

7. ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಸಲ್ಲಿಸಿದ ವರದಿಯಂತೆ ಅಕ್ರಮವಾಗಿ ಸಂಗ್ರಹಿಸಿರುವ/ಸಾಗಾಟ ಮಾಡಿರುವ ಮರಳನ್ನು ಕಂದಾಯ ಇಲಾಖೆ, ಪೋಲೀಸ್ ಇಲಾಖೆ, ಗಣಿ ಇಲಾಖೆಯವರಿಂದ ಜಪ್ತಿ ಮಾಡಿದ್ದು ಇಲಾಖೆಯವರ ಕೋರಿಕೆಯಂತೆ ಜಪ್ತಿ ಮಾಡಿರುವ ಮರಳನ್ನು ಲೋಕೋಪಯೋಗಿ ಇಲಾಖೆಯವರ ಸಿಬ್ಬಂದಿ ವರ್ಗದವರಿಂದ ಅಳತೆ ಮಾಡಿಸಿ ಅದೇ ಆವರಣದಲ್ಲಿ ಸಂಗ್ರಹಿಸಲಾಗುತ್ತಿದ್ದು, ಇದರ ನಿಗಾ ಮತ್ತು ನಿರ್ವಹಣೆ ಮಾಡುವುದು ಆಯಾಯ ಇಲಾಖೆಗಳ ಜವಾಬ್ದಾರಿಯಾಗಿರುತ್ತದೆ.

8. ಸಾರ್ವಜನಿಕ ಕೋರಿಕೆಯ ಅರ್ಜಿಗಳನುಸಾರ ಆದ್ಯತೆ ಮೇರೆಗೆ ಸಂಬಂಧಿಸಿದವರಿಂದ ಮರಳಿನ ಪ್ರಮಾಣಕ್ಕೆ ತಗಲುವ ಮೊತ್ತವನ್ನು ಡಿ.ಡಿ. ಮುಖಾಂತರ ಪಡೆದುಕೊಂಡು ನಂತರ ಪರ್ಮಿಟ್‌ಗಳನ್ನು ವಿತರಿಸಲಾಗುತ್ತದೆ. ಟಾಸ್ಕ್ ಪೋರ್ಸ್ ಸಮಿತಿಯು ನಿಗಧಿಪಡಿಸಿದ ದರದಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಾಮರಾಜನಗರ ಇವರ ಹೆಸರಿಗೆ ಮರಳಿನ ಪ್ರಮಾಣಕ್ಕೆ ತಗಲುವ ಮೊತ್ತಕ್ಕೆ ಡಿ.ಡಿ. ಪಡೆದುಕೊಂಡು ವಿತರಿಸಲಾಗುತ್ತದೆ. ಡಿ.ಡಿ. ಗಳನ್ನು ವಿಭಾಗ ಕಛೇರಿಗೆ ಸಲ್ಲಿಸಲಾಗಿದ್ದು, ವಿಭಾಗದಿಂದ ರಾಜಧನವನ್ನು ಸರ್ಕಾರಕ್ಕೆ ರೆಮಿಟೆನ್ಸ್ ಮಾಡಲಾಗಿರುತ್ತದೆ.

9. ಲೋಕೋಪಯೋಗಿ ಇಲಾಖೆ ಕಛೇರಿಯಿಂದ ಯಾವುದೇ ಹರಾಜು ಪ್ರಕ್ರಿಯೆ ನಡೆದಿರುವುದಿಲ್ಲ. ಜಪ್ತಿ ಮಾಡಿರುವ ಮರಳನ್ನು ಗ್ರಾಹಕರಿಗೆ ವಿತರಿಸಿ ಉಳಿಕೆಯಾಗಿರುವ ಮರಳನ್ನು ಗಣಿ ಮತ್ತು ಭೂವಿಜ್ಞಾನ ಇಲಾಖೆ, ಚಾಮರಾಜನಗರ ರವರಿಗೆ ಹಸ್ತಾಂತರಿಸಲಾಗಿದೆ.

10. ವಿಭಾಗ ಕಛೇರಿಯಿಂದ ಲಭ್ಯವಿರುವ ದಾಖಲೆಗಳ ಪ್ರಕಾರ ವಶಪಡಿಸಿಕೊಂಡ ಮರಳಿನ ವಿಲೇವಾರಿ ಬಾಬ್ತು 10/2014 ರಿಂದ 08/2015 ರವರೆಗೆ ಸ್ವೀಕರಿಸಿರುವ ಡಿ.ಡಿ. ಸಂಖ್ಯೆ, ಮೊಬಲಗು, ಸರ್ಕಾರಕ್ಕೆ ಸಂದಾಯ ಮಾಡಿರುವ ದಿನಾಂಕ ಹಾಗೂ ಮೊಬಲಗು ಯಾವುದು ಇರುವುದಿಲ್ಲ ಎಂಬುದಾಗಿ 7ನೇ ಎದುರುದಾರರು ತಿಳಿಸಿ ದೃಢೀಕೃತ ದಾಖಲಾತಿಗಳನ್ನು ನೀಡಿರುತ್ತಾರೆ.

11. ಜಪ್ತಿ ಮಾಡಲಾದ ಮರಳನ್ನು ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷರು ಮತ್ತು ಉಪ ವಿಭಾಗಾಧಿಕಾರಿಗಳ ನಿರ್ದೇಶನದಂತೆ ಮಾಡದೆ 2ನೇ ಮತ್ತು 3ನೇ ಎದುರುದಾರರು ಪರ್ಮಿಟ್ ನೀಡಿ ತಮ್ಮ ತಮ್ಮ ಹೆಸರಿನಲ್ಲಿ ಸರ್ಕಾರಕ್ಕೆ ಹಣವನ್ನು ಸಂದಾಯ ಮಾಡಿರುತ್ತಾರೆ. ಮರಳನ್ನು ಜಪ್ತಿ ಮಾಡಿ ಅಳತೆ ಮಾಡಿರುವ ಬಗ್ಗೆ ಅಥವಾ ಮರಳನ್ನು ವಿಲೇವಾರಿ ಮಾಡಿರುವ ಬಗ್ಗೆ ಕಂದಾಯ ಇಲಾಖೆಯವರಾಗಲಿ ಅಥವಾ ಲೋಕೋಪಯೋಗಿ ಇಲಾಖೆಯವರಾಗಲಿ ಸ್ಟಾಕ್ ರಿಜಿಸ್ಟರ್ ತೆರೆಯದೆ ಕೇವಲ ಅಳತೆಯ ಪ್ರಮಾಣವನ್ನು ನಮೂದಿಸಿರುವುದು ದಾಖಲಾತಿಗಳಿಂದ ಕಂಡುಬಂದಿರುತ್ತದೆ.

12. 2ನೇ ಎದುರುದಾರರು ಕರ್ತವ್ಯದಲ್ಲಿದ್ದಾಗ ಅಕ್ರಮ ಮರಳು ಸಾಗಾಣಿಕೆ ಸಂಬಂಧ ಜಪ್ತಿ ಮಾಡಿ ವಿಲೇ ಮಾಡಿರುವ 126 ಪ್ರಕರಣಗಳಲ್ಲಿ 125 ಪ್ರಕರಣಗಳ ವಿಲೇವಾರಿಯನ್ನು ಮರಳು ಮಾನಿಟರಿಂಗ್ ಕಮಿಟಿ ನಿರ್ದೇಶನದಂತೆ, ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಜಲ ಸಾರಿಗೆ ಇಲಾಖೆ, ಚಾಮರಾಜನಗರ ವಿಭಾಗದ ಇವರ ಅನುಮತಿ ಮೇರೆಗೆ ಮಾಡಿ ಸರ್ಕಾರಕ್ಕೆ ಹಣ ಸಂದಾಯ ಮಾಡಿದ್ದು ಆದರೆ 01 ಪ್ರಕರಣದಲ್ಲಿ ಪರ್ಮಿಟ್ ಸಂಖ್ಯೆ: 111/2014-15, ದಿನಾಂಕ: 21/02/2015, ರಲ್ಲಿ 7.50 ಘನ ಮೀಟರ್ ಅಳತೆಯ ಮರಳನ್ನು ವಿಲೇವಾರಿ ಮಾಡಲು ಸ್ವತ: 2ನೇ ಎದುರುದಾರರು ಪರ್ಮಿಟ್ ನೀಡಿ ಈ ಸಂಬಂಧ ಡಿ.ಡಿ. ಸಂಖ್ಯೆ: 099784 ರೂ.6,750/- ಗಳನ್ನು ದಿನಾಂಕ: 15/05/2015 ರಂದು ಸೆಂಟ್ರಲ್ ಬ್ಯಾಂಕ್,

ಚಾಮರಾಜನಗರ ಇಲ್ಲಿಗೆ ಸಂದಾಯ ಮಾಡಿ ಚಲನ್ ಅನ್ನು ಲೋಕೋಪಯೋಗಿ ಬಂದರು ಮತ್ತು ಜಲಸಾರಿಗೆ ಇಲಾಖೆಗೆ ನೀಡಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ.

13. ಕೊಳ್ಳೇಗಾಲ ಉಪ ವಿಭಾಗದ ಕಛೇರಿಯಲ್ಲಿ ಶಾಖಾಧಿಕಾರಿಗಳಾದ ಶ್ರೀ ಬಿ.ರಮೇಶ್, ಸಹಾಯಕ ಇಂಜಿನಿಯರ್, ಶ್ರೀ ಪಿ.ಸಿನ್ನಣ್ಣನ್, ಸಹಾಯಕ ಇಂಜಿನಿಯರ್ ವಿಭಾಗ-2, ಶ್ರೀ ಎಸ್.ಸುರೇಂದ್ರ ಕುಮಾರ್, ಕಿರಿಯ ಇಂಜಿನಿಯರ್, ಶ್ರೀ ಎಂ.ರೇವಣ್ಣ, ಕಿರಿಯ ಇಂಜಿನಿಯರ್ ಹಾಗೂ ಕುಮಾರಿ ಅಕ್ಷತಾ, ಕಿರಿಯ ಇಂಜಿನಿಯರ್, ಇವರುಗಳು ಜಪ್ತಿ ಮಾಡಿದ ಮರಳಿನ ಅಳತೆ ಹಾಗೂ ಕಾರ್ಯವನ್ನು ನಿರ್ವಹಿಸಿದ್ದು ಮರಳನ್ನು ಅಳತೆ ಮಾಡಿರುವ ಬಗ್ಗೆ ಹಾಗೂ ಮರಳಿನ ವಿಲೇವಾರಿಯಾದ ಬಗ್ಗೆಯಾಗಲೀ ಸ್ಟಾಕ್ ರಿಜಿಸ್ಟರ್ ತೆರೆಯದೆ ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಳ್ಳೇಗಾಲ ಉಪ ವಿಭಾಗ ರವರು ಸಲ್ಲಿಸಿರುವ 2015, 2016, 2017ನೇ ಸಾಲಿನ ಮರಳು ವಿಲೇವಾರಿ ವರದಿಯಲ್ಲಿ ನಿಖರವಾದ ಮರಳಿನ ವಿಲೇವಾರಿ ಮಾಹಿತಿಯನ್ನು ನೀಡಿರುವುದಿಲ್ಲ ಎಂಬಂತೆ ಉಲ್ಲೇಖಿಸಿ ವರದಿಯನ್ನು ಸಲ್ಲಿಸಿರುತ್ತಾರೆ.

15. **4ನೇ ಎದುರುದಾರರ ಆಕ್ಷೇಪಣೆ:-**

ಕಾರ್ಯಪಾಲಕ ಅಭಿಯಂತರರಾಗಿ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಾಮರಾಜನಗರ ವಿಭಾಗ, ಚಾಮರಾಜನಗರ ಇಲ್ಲಿ ದಿನಾಂಕ: 16/06/2014 ರಿಂದ 31/12/2016 ರವರೆಗೆ ಕರ್ತವ್ಯ ನಿರ್ವಹಿಸಿ ದಿನಾಂಕ: 31/12/2016 ರಂದು ವಯೋ ನಿವೃತ್ತಿ ಹೊಂದಿರುವುದಾಗಿ ತಿಳಿಸಿರುತ್ತಾರೆ.

16. ಜಿಲ್ಲಾ ಮತ್ತು ತಾಲ್ಲೂಕು ಮರಳು ಉಸ್ತುವಾರಿ ಸಮಿತಿಯ ನಿರ್ದೇಶನದಂತೆ ಕಾವೇರಿ ನದಿಯ ಬಯಲಿನಲ್ಲಿ ಹಾಗೂ ತಾಲ್ಲೂಕಿನ ವ್ಯಾಪ್ತಿಯಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಮತ್ತು ಎತ್ತಿನಗಾಡಿ, ಟ್ರ್ಯಾಕ್ಟರ್, ಲಾರಿ ಹಾಗೂ ಇತರೆ ವಾಹನಗಳಲ್ಲಿ ಅಕ್ರಮವಾಗಿ ಸಾಗಾಣಿಕೆ ಮಾಡಲಾಗುತ್ತಿದ್ದ ಮರಳನ್ನು ತಾಲ್ಲೂಕು ಮರಳು ಉಸ್ತುವಾರಿ ಸಮಿತಿಯ ಇತರೆ ಸದಸ್ಯ ಇಲಾಖೆ, ಅಂದರೆ, ಪೋಲೀಸ್ ಇಲಾಖೆ, ಕಂದಾಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ ರವರು ಜಫ್ತಿ ಮಾಡಿರುವ ಮರಳನ್ನು ಸಂಬಂಧಪಟ್ಟವರ ಕಛೇರಿಯ ಆವರಣದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ, ಉಪ ವಿಭಾಗ ಕಛೇರಿ ಆವರಣದಲ್ಲಿ ಸಂಗ್ರಹಣೆ ಮಾಡಲಾಗಿರುತ್ತದೆ.

17. ಇಲಾಖೆ ರವರ ಕೋರಿಕೆಯ ಮೇರೆಗೆ ಜಫ್ತಿ ಮಾಡಿರುವ ಮರಳನ್ನು ಲೋಕೋಪಯೋಗಿ ಇಲಾಖೆ, ಉಪ ವಿಭಾಗದ ತಾಂತ್ರಿಕ ಸಿಬ್ಬಂದಿಯವರಿಂದ ಅಳತೆ ಮಾಡಿಸಿಕೊಂಡು ದಾಸ್ತಾನು ಮಾಡಿಕೊಂಡಿರುತ್ತಾರೆ. ಸದರಿ ಜಫ್ತಿ ಮಾಡಿ ದಾಸ್ತಾನು ಮಾಡಿರುವ ಮರಳು ವಿಲೇವಾರಿಯಾಗುವವರೆಗೆ ಸದರಿ ಮರಳಿನ ನಿಗಾ ಮತ್ತು ನಿರ್ವಹಣೆ ಮಾಡುವುದು ಆಯಾಯಾ ಇಲಾಖೆಯ ಜವಾಬ್ದಾರಿಯಾಗಿರುತ್ತದೆ.

18. **5ನೇ ಎದುರುದಾರರ ಆಕ್ಷೇಪಣೆ:**

ಸಹಾಯಕ ಕಾರ್ಯಪಾಲಕ ಅಭಿಯಂತರರು ಆಗಿ ಲೋಕೋಪಯೋಗಿ ಇಲಾಖೆ ಉಪ ವಿಭಾಗ ಕೊಳ್ಳೇಗಾಲದಲ್ಲಿ ದಿನಾಂಕ: 11/03/2011 ರಿಂದ 06/07/2014 ರವರೆಗೆ ಮತ್ತು ದಿನಾಂಕ: 21/07/2014 ರಿಂದ 30/05/2016 ರವರೆಗೆ ಕಾರ್ಯನಿರ್ವಹಿಸಿರುತ್ತೇನೆ. ಜಫ್ತಿ ಮಾಡಿದ ಮರಳನ್ನು ಸಂಬಂಧಿಸಿದ ಕಛೇರಿಯ ಆವರಣದಲ್ಲಿ ಶೇಖರಣೆ ಮಾಡಿರುತ್ತಾರೆ.

ಲೋಕೋಪಯೋಗಿ ಇಲಾಖೆ ತಾಂತ್ರಿಕ ಸಿಬ್ಬಂದಿಯಿಂದ ಮರಳಿನ ಪ್ರಮಾಣವನ್ನು ಅಳತೆ ಮಾಡಿಸಿ ಸಂಗ್ರಹಣೆ ಮಾಡಿಕೊಂಡಿರುತ್ತಾರೆ.

19. ಸಾರ್ವಜನಿಕರಿಂದ ಮತ್ತು ವಿವಿಧ ಇಲಾಖೆಗಳಿಂದ ಕಟ್ಟಡ ನಿರ್ಮಾಣಕ್ಕೆ ಬಂದ ಅರ್ಜಿಯೊಂದಿಗೆ ಕಾರ್ಯಪಾಲಕ ಅಭಿಯಂತರರು ಹೆಸರಿಸಿದ ಡಿ.ಡಿ.ಗಳನ್ನು ಪಡೆದು ಪರ್ಮಿಟನ್ನು ಉಪ ವಿಭಾಗ ತಾಂತ್ರಿಕ ಸಿಬ್ಬಂದಿಯಿಂದ ಜಿಲ್ಲಾ ಉಸ್ತುವಾರಿ ಸಮಿತಿಯ ನಿರ್ದೇಶನದಂತೆ ಎಸ್.ಎಸ್.ಪಿ.ಪಿ. ಪೇಪರ್‌ನಲ್ಲಿ ಎಂ.ಡಿ.ಪಿ. ಗಳನ್ನು ವಿತರಿಸಲಾಗಿದೆ. ಮರಳನ್ನು ಉಪ ವಿಭಾಗದ ಸಿಬ್ಬಂದಿಯಿಂದ ಅಳತೆ ಮಾಡಿಸಿ ಪರ್ಮಿಟ್‌ನಲ್ಲಿ ನಮೂದಿಸಿರುವ ವಾಹನಕ್ಕೆ ಪ್ರಮಾಣವನ್ನು ತುಂಬಿಸಿ ವಿತರಿಸಲಾಗಿದೆ.

20. ಕಾರ್ಯಪಾಲಕ ಅಭಿಯಂತರರ ಹೆಸರಿನಲ್ಲಿ ಅರ್ಜಿಯೊಂದಿಗೆ ಬಂದ ಎಲ್ಲಾ ಡಿ.ಡಿ. ಗಳನ್ನು ಕಾರ್ಯಪಾಲಕ ಅಭಿಯಂತರರಿಗೆ ಸಲ್ಲಿಸಲಾಗಿದೆ. ಸದರಿ ಡಿ.ಡಿ.ಗಳನ್ನು ಕಾರ್ಯಪಾಲಕ ಅಭಿಯಂತರರು ಸರ್ಕಾರಕ್ಕೆ ಜಮಾ ಮಾಡಿರುತ್ತಾರೆ. ಕೊಳ್ಳೇಗಾಲ ತಹಶೀಲ್ದಾರ್ ಕಛೇರಿಯ ಆವರಣದಲ್ಲಿ ವಶಪಡಿಸಿಕೊಂಡು ಶೇಖರಣೆ ಮಾಡಿದ ಮರಳಿಗೆ ಅವರ ಕಛೇರಿಯಿಂದ ಪರ್ಮಿಟ್ ನೀಡಿ ಅವರ ಕಛೇರಿಯಿಂದಲೇ ಮರಳನ್ನು ವಿತರಿಸಿ ಸಂಗ್ರಹಿಸಿದ ಡಿ.ಡಿ. ಗಳನ್ನು ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಸಲ್ಲಿಸಿರುತ್ತಾರೆ ಎಂದು ನಮೂದಿಸಿರುತ್ತಾರೆ.

21. **8ನೇ ಮತ್ತು 10ನೇ ಎದುರುದಾರರ ಆಕ್ಷೇಪಣೆಗಳು:-**

ಉಪ ವಿಭಾಗದಲ್ಲಿ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ವಿಭಾಗ ಮತ್ತು ಉಪ ವಿಭಾಗದ ಮುಖ್ಯಸ್ಥರು ನೀಡಿರುವ ಮರಳು ಸಂಗ್ರಹಣಾ ಕೇಂದ್ರದಿಂದ ನಿಗಧಿತ ವಾಹನಗಳಿಗೆ ಅಳತೆಯನ್ನು ನಮೂದಿಸಿ ತಾಲ್ಲೂಕು ಕಛೇರಿ ಸಿಬ್ಬಂದಿಯವರ ಸಮ್ಮುಖದಲ್ಲಿ ಮರಳನ್ನು ಲೋಡಿಂಗ್ ಮಾಡಿಸಿ

ಲಾರಿಗಳಿಗೆ ಮರಳನ್ನು ನೀಡಲಾಗಿರುತ್ತದೆ. ಈ ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ವಿವಿಧ ಪೋಲೀಸ್ ಠಾಣೆಗಳಿಂದ ಜಪ್ತಿ ಮಾಡಿರುವ ಅಕ್ರಮ ಮರಳನ್ನು ನ್ಯಾಯಾಧೀಶರ ಆದೇಶದ ಮೇರೆಗೆ ಈ ಉಪ ವಿಭಾಗದ ಮುಖ್ಯಸ್ಥರ ಆದೇಶದ ಮೇರೆಗೆ ಸದರಿ ವಾಹನಗಳಲ್ಲಿದ್ದ ಅಕ್ರಮ ಮರಳಿನ ಪರಿಮಾಣವನ್ನು ಅಳತೆ ಮಾಡಿ ತಹಶೀಲ್ದಾರ್, ಕೊಳ್ಳೇಗಾಲ ರವರ ವಶಕ್ಕೆ ನೀಡಲಾಗಿರುತ್ತದೆ ಎಂದು ನಮೂದಿಸಿರುತ್ತಾರೆ.

22. **11ನೇ ಎದುರುದಾರರ ಆಕ್ಷೇಪಣೆ:-** 2012-13 ರಿಂದ 2016-17ನೇ ಸಾಲಿನವರೆಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ನಂ.5, ಲೋಕೋಪಯೋಗಿ ಉಪ ವಿಭಾಗ, ಕೋಳ್ಳೇಗಾಲದಲ್ಲಿ ಕಿರಿಯ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ಈ ಅವಧಿಯಲ್ಲಿ ಮರಳು ಸಂಗ್ರಹಿಸಿ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ, ಲೋಕೋಪಯೋಗಿ ಇಲಾಖೆಯ ನಿಯಮದಂತೆ ಕೆಲಸವನ್ನು ನಿರ್ವಹಿಸಿದ್ದೇನೆ ಎಂದು ನಮೂದಿಸಿರುತ್ತಾರೆ.

23. **12ನೇ ಎದುರುದಾರರ ಆಕ್ಷೇಪಣೆ:**

**ದಿನಾಂಕ:** 29/09/2012 ರಿಂದ 02/11/2016 ರವರೆಗೆ ಕಿರಿಯ ಅಭಿಯಂತರರಾಗಿ ಲೋಕೋಪಯೋಗಿ ಇಲಾಖೆ, ಉಪ ವಿಭಾಗ, ಕೊಳ್ಳೇಗಾಲದಲ್ಲಿ ಕಾರ್ಯನಿರ್ವಹಿಸಿರುತ್ತೇನೆ. ಕೇವಲ ಪೋಲೀಸ್ ಇಲಾಖೆಯಿಂದ ಜಪ್ತಿ ಮಾಡಿ ನಮ್ಮ ಇಲಾಖೆಯ ಮತ್ತು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಇತರೆ ಇಲಾಖೆಗಳ ವಶಕ್ಕೆ ನೀಡುತ್ತಿದ್ದ ಲೋಡ್‌ಗಳ ಮರಳಿನ ಪರಿಮಾಣವನ್ನು ಮಾತ್ರ ಅಳತೆ ಮಾಡಿ ಧೃಢೀಕರಿಸಿರುತ್ತೇನೆ.

ತಮ್ಮ ಇಲಾಖೆಯ ಹಾಗೂ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿಯ ಇತರೆ ಇಲಾಖೆಗಳ ಆವರಣದಲ್ಲಿದ್ದ ವಶಪಡಿಸಿಕೊಂಡ ಮರಳಿಗೆ ನೀಡುತ್ತಿದ್ದ ಪರ್‌ಮಿಟ್‌ನಲ್ಲಿ ನಮೂದಿಸಿದ್ದ ಪರಿಮಾಣಕ್ಕೆ ಮರಳನ್ನು ಲಾರಿ ಲೋಡ್ ಮಾಡಲು ಅಳತೆಗಳನ್ನು ಮಾತ್ರ ಮಾಡಿ ಧೃಢೀಕರಿಸಿರುತ್ತೇನೆ.

24. ಸದರಿ ಪ್ರಕರಣದಲ್ಲಿ ತನಿಖಾವರದಿಯಿಂದ ಹಾಗೂ ದಾಖಲೆಯಿಂದ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತವೆ.

i) ಎದುರುದಾರ 2 ಇವರು ದಿ: 04/06/2014 ರಿಂದ ದಿ: 11/08/2016 ರ ವರೆಗೆ ಕೊಳ್ಳೆಗಾಲ ತಹಶೀಲ್ದಾರರಾಗಿ ಕಾರ್ಯನಿರ್ವಹಿಸಿದ್ದು, ಸದರಿಯವರ ಅವಧಿಯಲ್ಲಿ ಮರಳನ್ನು ಜಪ್ತಿಮಾಡಿದ್ದು, ಸದರಿ ಮರಳನ್ನು ತಮ್ಮ ಕಛೇರಿಯ ಆವರಣದಲ್ಲಿ ಎದುರುದಾರ 11 ಇವರ ಮುಖಾಂತರ ಅಳತೆ ಮಾಡಿಸಿ ದಸ್ತಾನು ಮಾಡಿಕೊಂಡಿದ್ದು, ಆದರೆ ದಸ್ತಾನು ಮಾಡಿದ ಮರಳಿನ ಸಂಬಂಧ ದಸ್ತಾನು ವಹಿ ಮತ್ತು ವಿಲೇವಾರಿ ವಹಿಯನ್ನು ನಿರ್ವಹಿಸಿರುವುದಿಲ್ಲ.

ii) ಎದುರುದಾರ 2 ಮತ್ತು 11 ಇವರು ದಸ್ತಾನುವಹಿ ಮತ್ತು ವಿಲೇವಾರಿ ವಹಿಯನ್ನು ನಿರ್ವಹಿಸದೇ ಮರಳನ್ನು ವಿಲೇವಾರಿ ಮಾಡಿರುವುದರಿಂದ ಎಷ್ಟು ಪ್ರಮಾಣದಲ್ಲಿ ದಸ್ತಾನು ಮಾಡಲಾಗಿತ್ತು ಹಾಗೂ ಎಷ್ಟು ಪ್ರಮಾಣದಲ್ಲಿ ವಿಲೇವಾರಿಯಾಗಿರುತ್ತದೆ ಎನ್ನುವುದಕ್ಕೆ ಯಾವುದೇ ಲೆಕ್ಕ ಇಡದೇ ಹೋಗಿರುವುದರಿಂದ ಸರ್ಕಾರಕ್ಕೆ ಇದರಿಂದ ನಷ್ಟವುಂಟಾಗಿರುತ್ತದೆ.

iii) ಎದುರುದಾರ 2 ಇವರು ಜಪ್ತಿ ಮಾಡಿದ ಮರಳಿನ ಕುರಿತು ಎದುರುದಾರ 11 ಮತ್ತು 12 ಇವರಿಗೆ ಅಳತೆ ಮಾಡಲು ಪತ್ರ ಬರೆದಿದ್ದು, ಅಳತೆ ಮಾಡಿದ ಕುರಿತು ದಾಸ್ತಾನುವಹಿಯನ್ನು ಇಟ್ಟಿರುವುದಿಲ್ಲ. ಎದುರುದಾರ 2 ಇವರ ಕಛೇರಿ ಆವರಣದಲ್ಲಿ ಇದ್ದ ಮರಳನ್ನು ಎದುರುದಾರ 2 ಇವರೇ ವಿಲೇವಾರಿ ಮಾಡಿರುವುದು ಎದುರುದಾರ 4 ಮತ್ತು 5 ಇವರ ಆಕ್ಷೇಪಣೆಯಿಂದ ಸಾಬೀತಾಗುತ್ತದೆ.

iv) ಎದುರುದಾರ 2 ಇವರು ಎಷ್ಟು ಪ್ರಮಾಣದ ಮರಳನ್ನು ವಿಲೇವಾರಿ ಮಾಡಿದರು ಎನ್ನುವುದಕ್ಕೆ ಯಾವುದೇ ದಾಖಲೆ ನಿರ್ವಹಿಸದೇ ಹೋಗಿರುವುದರಿಂದ ತಮ್ಮ ಕರ್ತವ್ಯದಲ್ಲಿ ಲೋಪವೆಸಗಿರುತ್ತಾರೆ.

v) ಎದುರುದಾರ 11 ಮತ್ತು 12 ಇವರು ಜಿಲ್ಲಾ ಮರಳು ಪರಿಶೀಲನಾ ಸಮಿತಿ ವಹಿಸಿರುವ ಜವಾಬ್ದಾರಿಯಂತೆ ಜಪ್ತಿ ಮಾಡಲಾದ ಮರಳನ್ನು ಅಳತೆ ಮಾಡಿ ನಂತರ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇವರು ವಿಲೇವಾರಿಗೆ ನೀಡುವ ಪರ್ಮಿಟ್‌ಗಳ ಅನ್ವಯ ವಿಲೇವಾರಿ ಮಾಡಬೇಕಾಗಿದ್ದು, ಹಾಗೂ ಎದುರುದಾರ 4 ಮತ್ತು 5 ಇವರು ಮರಳನ್ನು ತಮ್ಮ ಕಛೇರಿ ಆವರಣದಲ್ಲಿ ಶೇಖರಿಸಿದ ಸಂಬಂಧ ವಿಲೇವಾರಿ ಮಾಡುವ ಅಧಿಕಾರ ಹೊಂದಿದ್ದು, ಎದುರುದಾರ 11 ಮತ್ತು 12 ಇವರಿಗೆ

ಕರ್ತವ್ಯ ನಿರ್ವಹಿಸಲು ಮತ್ತು ನಿಗಾ ವಹಿಸಲು ಸ್ವಾಧೀನ ನೀಡಿರುತ್ತಾರೆ. ಇದರಿಂದ ಎದುರುದಾರ 11 ಮತ್ತು 12 ಇವರು ತಮ್ಮ ಕರ್ತವ್ಯ ಲೋಪವೆಸಗಿರುವುದು ಕಂಡುಬರುತ್ತದೆ.

vi) ಎದುರುದಾರ 11 ಇವರು 2012-13 ರಿಂದ 2016-17 ನೇ ಸಾಲಿನವರೆಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಂದು ಹಾಗೂ ಎದುರುದಾರ 12 ಇವರು ದಿ: 29/09/2012 ರಿಂದ 02/11/2016 ರವರೆಗೆ ಕಿರಿಯ ಅಭಿಯಂತರ ಲೋಕೋಪಯೋಗಿ ಇಲಾಖೆ ಕೊಳ್ಳೆಗಾಲ ಇಲ್ಲಿ ಕೆಲಸ ನಿರ್ವಹಿಸಿದ್ದು, ಸದರಿಯವರ ಅವಧಿಯಲ್ಲಿ ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ನೀಡಿದ ಮರಗಳನ್ನು ತಮ್ಮ ವಶಕ್ಕೆ ಪಡೆದು ಅಳತೆ ಮಾಡಿ ದೃಢೀಕರಿಸಿದ್ದು, ಆದರೆ ದಸ್ತಾನು ವಹಿ ಹಾಗೂ ವಿಲೇವಾರಿ ವಹಿಯನ್ನು ನಿರ್ವಹಿಸಿರುವುದಿಲ್ಲ.

vii) ಎದುರುದಾರ 4 ಮತ್ತು 5 ಇವರು ಎದುರುದಾರ 11 ಮತ್ತು 12ರ ಮೇಲುಸ್ತುವಾರಿಯಲ್ಲಿದ್ದು, ಸದರಿಯವರು ನೀಡಿದ ನಿರ್ದೇಶನಗಳನ್ನು ಎದುರುದಾರ 11 ಮತ್ತು 12 ಇವರು ಪಾಲೀಸದೇ ನಿರ್ಲಕ್ಷ್ಯ ವಹಿಸಿರುವುದು ದಾಖಲೆಗಳಿಂದ ಕಂಡುಬರುತ್ತದೆ.

25. ಈ ಮೇಲ್ಕಾಣಿಸಿದ ಕಾರಣಗಳಾಗಿ ಎದುರುದಾರ 2 ಇವರು ದಿ: 04/06/2014 ರಿಂದ 11/08/2016 ರ ವರೆಗೆ ತಹಶೀಲ್ದಾರರು ಕೊಳ್ಳೆಗಾಲ ಎಂದು ಕಾರ್ಯನಿರ್ವಹಿಸುವಾಗ ಜಪ್ತಿಯಾದ ಮರಗಳನ್ನು ತಮ್ಮ ಸ್ವಾಧೀನಕ್ಕೆ ಪಡೆದು ಕಚೇರಿಯ ಆವರಣದಲ್ಲಿ ಶೇಖರಣೆ ಮಾಡಿಸಿದ್ದು, ಯಾವುದೇ ದಾಸ್ತಾನುವಹಿ ಹಾಗೂ ವಿಲೇವಾರಿವಹಿಯನ್ನು ನಿರ್ವಹಿಸದೇ ಹೋಗಿದ್ದು, ಎದುರುದಾರ 11 ಮತ್ತು 12 ಇವರು ಲೋಕೋಪಯೋಗಿ ಇಲಾಖೆಯ ಮರಗಳ ಉಸ್ತುವಾರಿ ಹಾಗೂ ಸಾಗಾಟದ ಉಸ್ತುವಾರಿ ಅಧಿಕಾರಿಗಳಾಗಿದ್ದು, ಎದುರುದಾರ 2 ಇವರು ಮರಗಳ ಅಳತೆ ಮಾಡುವ ಜವಾಬ್ದಾರಿಯನ್ನು ನಿರ್ವಹಿಸಿದ್ದು, ಎದುರುದಾರ 11 ಮತ್ತು 12 ಇವರು ಶೇಖರಣೆಯಾದ ಮರಗಳ ದಾಸ್ತಾನುವಹಿ ಹಾಗೂ ವಿಲೇವಾರಿ ವಹಿಯನ್ನು ನಿರ್ವಹಿಸದೇ ತಮ್ಮ ಕರ್ತವ್ಯದಲ್ಲಿ ಲೋಪವೆಸಗಿದ್ದರಿಂದ ಸರ್ಕಾರದ ರಾಜಧನಕ್ಕೆ ನಷ್ಟವುಂಟಾಗಿರುತ್ತದೆ. ಸದರಿ ನಷ್ಟವನ್ನು ಭರಿಸಿಕೊಳ್ಳುವ ಬಗ್ಗೆ ಸೂಕ್ತ ಕ್ರಮ ಜರುಗಿಸಿ ಸಂಬಂಧಪಟ್ಟವರಿಂದ ಸರ್ಕಾರಕ್ಕೆ ಜಮಾ ಮಾಡಿಸಿಕೊಳ್ಳುವಂತೆ ಸಕ್ಷಮ ಪ್ರಾಧಿಕಾರಿಕ್ಕೆ ಕರ್ನಾಟಕ

ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

26. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

6/4

**[ನ್ಯಾಯಮೂರ್ತಿ ಬಿ.ಎಸ್.ಪಾಟೀಲ್]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**